**ದಿನಾಂಕಃ23.09.2023 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟಿಸವಾಲುಃ ವಾದಿ ಪರ ಶ್ರೀ. ವಿ.ಎ., ವಕೀಲರಿಂದಃ**

ನಾನು ವಾದಿಯು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ ಎಂದು ಎಲ್ಲಿಯೂ ಹೇಳಿರುವುದಿಲ್ಲ. ಅದೇ ರೀತಿ ವಾದಿಯು ಕೋಲಾರದ ನ್ಯಾಯಾಲಯಗಳಲ್ಲಿ ಮತ್ತು ಇಲ್ಲಿಯ ನ್ಯಾಯಾಲಯಗಳಲ್ಲಿ ದಾವೆ ಹೂಡಿರುತ್ತಾರೆ ಎಂದು ನನ್ನ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಆ ರೀತಿಯಾಗಿ ಶ್ರೀನಿವಾಸಪುರದ ನ್ಯಾಯಾಲಯದಲ್ಲಿ ಯಾವ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿ ದಾವೆ ಹೂಡಿರುವುದಿಲ್ಲ ನಾನೇ ವಾದಿಯ ವಿರುದ್ಧ ಅಸಲು ದಾವೆ ಸಂಖ್ಯೆಃ 18/1997 ಎಂದು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವಾದಿ ಮತ್ತು ಇತರರು ಶಾಮೀಲಾಗಿ ಅಸಲು ದಾವೆ ಸಂಖ್ಯೆಃ 127/2012 ಮತ್ತು 142/2008 ರ ದಾವೆಗಳನ್ನು ಹೂಡಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳಾದ ಐಟಂ ನಂ1 ರಿಂದ 10 ರ ಆಸ್ತಿಗಳು ವಾದಿಯ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವೂ ವೆಂಕಟಪ್ಪ ಬಿನ್ ವೆಂಕಟಪ್ಪ ಅವರ ಸ್ವಂತ ಆಸ್ತಿಗಳು ಇರುತ್ತವೆ. ಸದರಿ ವೆಂಕಟಪ್ಪನೇ ಸದರಿ ದಾವಾ ಆಸ್ತಿಗಳನ್ನು ಉಳುಮೆ ಮಾಡುತ್ತಾ ಅನುಭವಿಸುತ್ತಾ ಬಂದಿದ್ದು, ಅವರಿಗೆ ಸದರಿ ಆಸ್ತಿಗಳು ಹೇಗೆ ಬಂದವು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ದಾವಾ ಆಸ್ತಿಗಳು ವಾದಿಯ ಒಟ್ಟು ಕುಟುಂಬದ ಆಸ್ತಿಗಳಿದ್ದರೂ ಸಹಾ ನಾನು ಸದರಿ ಆಸ್ತಿಗಳು ವೆಂಕಟಪ್ಪನ ಸ್ವಯಾರ್ಜಿತ ಆಸ್ತಿಗಳು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳು ವೆಂಕಟಪ್ಪನ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದು ಹೇಳಲು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ನಾನು ಮತ್ತು ಪ್ರತಿವಾದಿ 1 ರಿಂದ 4 ನೇ ದವರು ಶಾಮೀಲಾಗಿ ವಾದಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 10.01.2014 ರಲ್ಲಿ ವಾದಿಯು ಪ್ರತಿವಾದಿಗಳನ್ನು ತನ್ನ ಭಾಗವನ್ನು ನೀಡುವಂತೆ ಕೇಳಿಕೊಂಡರೂ ಸಹಾ ಪ್ರತಿವಾದಿಗಳು ವಾದಿಗೆ ಭಾಗಕೊಡಲು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು

ಹೇಳುವಂತೆ ನನಗೆ ಚೌಡಮ್ಮ ಬರೆದುಕೊಟ್ಟ ದಾನಪತ್ರ ಚೌಡಮ್ಮನಿಗೆ ಇರುವ ಸೀಮಿತ ಹಕ್ಕಿಗೆ ಮಾತ್ರ ಊರ್ಜಿತ ಇದ್ದು, ಚೌಡಮ್ಮನಿಗೆ ಸಂಪೂರ್ಣ ಆಸ್ತಿಯನ್ನು ದಾನ ಪತ್ರದ ಮುಖಾಂತರ ಬರೆದುಕೊಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚೌಡಮ್ಮ ವಾದಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡುವುದನ್ನು ತಪ್ಪಿಸುವ ಸಲುವಾಗಿ ಸದರಿ ದಾನ ಪತ್ರವನ್ನು ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ವೆಂಕಟಪ್ಪನಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವೆಂಕಟಪ್ಪನ ಮಗಳಾದ ಈರಮ್ಮಳಿಗೆ ಚೌಡಮ್ಮ ಅವರಿಗೆ ದಾನಪತ್ರ ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚೌಡಮ್ಮಳಿಗೆ ನನಗೆ ದಾನ ಪತ್ರ ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ದಿನಾಂಕ: 25.11.1918 ರ ಉಯಿಲು ಪತ್ರದಂತೆ ವೆಂಕಟಪ್ಪನಿಗೆ ಕೇವಲ ಮೂರನೆ ಒಂದು ಹಿಸ್ಸೆಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಆದರೂ ಸಹಾ ವೆಂಕಟಪ್ಪ ಕಾನೂನು ಬಾಹಿರವಾಗಿ ತನಗೆ ಹಕ್ಕು ಇರದ ಆಸ್ತಿಗಳನ್ನು ಸಹಾ ಸೇರಿಸಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿರುತಾತರೆ ಎಂದರೆ ಸರಿಯಲ್ಲ. ನಿಡಿ.2 ರ ಕ್ರಯ ಪತ್ರವನ್ನು ನಾನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಕಬಳಿಸುವ ಸಲುವಾಗಿ ನಾನು ನಿಡಿ.2 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ.2 ರಿಂದ 7 ನೇ ದಾಖಲೆಗಳು ಸೃಷ್ಟಿಸಿದ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗುವಂತೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್.ಹೆಚ್.ಆರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.